ಸಂಜೆ ಕಂತುತಿತ್ತು. ಮನೆಗೆ ಸಮೀಪ ಅಂತ ಮಾಳಮಡ್ಡಿಯ ಮೇನ್ ಬ್ರಾಂಚ್‌ಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದಾಗಿನಿಂದ ಬ್ಯಾಂಕಿನಿಂದ ಹೆಜ್ಜೆ ತೆಗೀಬೇಕಾದ್ದು ಬಿಸಿಲು ಆರಿ ತಣ್ಣಗಾದ ಮೇಲೆಯೇ ಎಂದುಕೊಳ್ಳುತ್ತ ಈಗೀಗ ಕಂಪಲ್ಸರಿ ಸ್ಟಾಪ್ ಅನ್ನುವ ಹಾಗೆ ಆಗಿಹೋಗಿರುವ ಆ ಮರದ ಕೆಳಗಿನ ಕಟ್ಟೆಯ ಮೇಲೆ ಕುಳಿತಳು. ಬೇಸಿಗೆ ಸುಡತೊಡಗಿದಂತೆ ಗುಲ್‌ಮೊಹರ್‌ಗಳು ಬಣ್ಣದ ಕಾರಂಜಿ ಚಿಮ್ಮಿಸಿಬಿಡುತ್ತವೆ. ನನಗೀಗಲೂ ಆ ಬಣ್ಣದ ನೆರಳು ಬದುಕಿನ ಎಲ್ಲ ಧಾವಂತವನ್ನು ಮರೆಸಿಡುವಷ್ಟು ಆಲ್ಹಾದಮಯವೇ. ಅನ್ನಿಸಿ ಶಾಲಿನಿ ಹಗುರವಾದಳು. ಬಸ್ಸು ಕೊಂಚ ಸುಧಾರಿಸಿಕೊಂಡು ಮೆಲ್ಲ ಬರಲಿ ಬಿಡು ಏನೀಗ? ಅನ್ನಿಸಿತು. ನಾಳೆ ಬ್ಯಾಂಕಿಗೆ ರಜೆ ಎಂಬ ಉಮೇದಿಗೋ, ಸುಳಿದ ಸಣ್ಣಗಾಳಿಗೆ ಒಂದು ಗುಲ್‌ಮೊಹರ್ ಎಸಳು ಟಪ್ಪಂತ ಹೆಗಲ ಮೇಲೆ ಬಿದ್ದು ಉಡಿಯಲ್ಲಿ ಕೂತುಬಿಟ್ಟ ಗೆಲುವಿಗೋ, ಅಜ್ಜನ ಮನೆ ದಣಪೆಯಲ್ಲಿ ಗುಪ್ಪೆ ಗುಪ್ಪೆ ರಾಶಿ ಬೀಳುತ್ತಿದ್ದ ಗುಲ್‌ಮೊಹರ್ ದಳಗಳು ಬಾಲ್ಯದೊಂದಿಗೇ ಬೆಸೆಯಬಂದದ್ದು ನೆನಪಾಗಿ ಆ ಎಸಳನ್ನು ಮಮತೆಯಿಂದ ಎತ್ತಿ ನೇವರಿಸಿದಳು. ಒಂದಿಷ್ಟು ಉಗುಳು ಹಚ್ಚಿ ಮೈಗೆ ಟಪ್ ಅಂತ ಬಡಿದುಕೊಂಡರೆ, ತಾಸುಗಟ್ಟಲೆ ವಿಧೇಯವಾಗಿ ಕೂತುಬಿಡುವ ಪಕಳೆಗಳು. ಬಚ್ಚಲಮನೆಯ ಒಲೆಯ ಕೆಂಡ ತೇದು ಮೀಸೆಗಡ್ಡ ಮಾಡಿಕೊಳ್ಳುತ್ತಿದ್ದ, ಬೂದಿ – ಸೇಡಿಮಣ್ಣು ಕಲಸಿ ಶಿವನ ಮೇಕಪ್ಪು ಸಿದ್ಧವಾಗುತ್ತಿದ್ದ, ಅಡಿಗೆ ಮನೆ ತಾಂಬೋಳೆ ಡಬ್ಬು ಹಾಕಿ ಕೋಲು ಬಡಿದು ಚಂಡೆಯ ನಾದ ಮೊಳಗಿಸುತ್ತಿದ್ದ ಕಾಲದಲ್ಲಿ ಕಾಲಬುಡದಲ್ಲಿ ಉದುರಿದ ಈ ಕೆಂಪು ಹಳದಿ ಎಸಳುಗಳು ಆಟ ಕುಣಿಯುವ ಉಮೇದಿ ಹೆಚ್ಚಿಸುತ್ತಿದ್ದುದು ಸುಳ್ಳಲ್ಲ. ಪಾಂಡಣ್ಣನ ಮಗ ಮೋಹನನಿಗಂತೂ ಗುಲ್‌ಮೊಹರ್ ಮರದ ಬೀಜ ತುಂಬಿದ್ದ ಉದ್ದ ಕಾಯಿ ಕೊಟ್ಟು, 'ತಕಳಪ್ಪ ನಿಂಗೆ' ಅಂತ ಉಬ್ಬಿಸಿಬಿಟ್ಟರೆ, ಎಲ್ಲರೂ 'ನಂಗ್ಬ್ಯಾಡ, ನಂಗ್ಬ್ಯಾಡ' ಅಂತ ದೂಕುತ್ತ ಬಂದ ರಾಕೇಸ ಪಾತ್ರವನ್ನು ಮಹಾ ಘನಸ್ಥನ ಹಾಗೆ ಒಪ್ಪಿಕೊಳ್ಳುತ್ತಿದ್ದ. ಅವನದ್ದೊಂದೇ ಕಂಡೀಶನ್. ಆ ಕತ್ತಿಯಂತಹ, ಅಲುಗಿಸಿದರೆ ಸಣ್ಣಗೆ ಕಳಕಳ ಸದ್ದು ಮಾಡುವ ಕಾಯನ್ನು ಅಂದಿನ ಯಕ್ಷಗಾನದಾಟದಲ್ಲಿ ಬೇರೆ ಯಾವ ಪಾತ್ರಧಾರಿಯೂ ಹಿಡೀಬಾರದಿತ್ತು. ಯಾರಾದ್ರೂ ಚೋಟುದ್ದದ ಈ ಪೋರನದೇನು ಅಂತ ಮುಖವಾರಿ ಮಾಡಿ ತಂದರೋ, ಅಷ್ಟೆಲ್ಲ ಕಷ್ಟದಿಂದ ತಯಾರು ಮಾಡಿದ್ದ ಆಟ ಬರಕಾಸ್ತು ಆದ ಹಾಗೆಯೇ, ರಾವಣೇಶ್ವರನ ಯಾಸವನ್ನೇ ಹಾಕಿದ್ದರೂ ಈ ಮೋಹನ, ಆಟದ ಕಥೆ ಹಾಡುವ

